ಶ್ರೀ ರಮೇಶ್ ಕುಮಾರ್.– ಮಾನ್ಯ ಸದಸ್ಯರಾದ ಹನುಮೇಗೌಡರು ಕೇಳಿದ ಪ್ರಶ್ನೆಗೆ ಬಹು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರಿಸಿದ್ದೀರಿ. ಬಹು ಬೇಗ ಎನ್ನುವುದಕ್ಕೆ ಒಂದು ತಿಂಗಳೊಳಗೋ ೨ ತಿಂಗಳೊಳಗೋ ಎಂದು ಏನಾದರೂ ಕಾಲಮಿತಿ ಇದೆಯೇ? ಏಕೆಂದರೆ ಕೋಲಾರದ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ವರ್ಷದಿಂದ ಎಕ್ಸ್‌ರೇ ಕೆಲಸ ಮಾಡುತ್ತಿಲ್ಲ, ಬಹುಬೇಗ ಎಂಬುದಕ್ಕೆ ಅರ್ಥ ತಿಳಿಸಿದರೆ ರಾಜೀಯಾಗುತ್ತೇನೆ.

ಶ್ರೀ ಎಂ. ಮಲ್ಲಪ್ಪ.– ಕೋಲಾರದ್ದು ರಿಪೇರಿಯಾಗಿದೆ. ಇಂಥ ಕಡೆ ಇದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಹೇಳುತ್ತೇನೆ.

ಶ್ರೀ ಚೌಡಾರೆಡ್ಡಿ.– ನಾನು ಸ್ಯಾನಿಟೋರಿಯಂಗೆ ರೋಗಿಗಳನ್ನು ಕರೆದುಕೊಂಡು ಹೋದಾಗಲೂ ಕೂಡ, ಎಕ್ಸ್‌ರೇ ಪ್ಲಾಂಟ್‌ಗೋಸ್ಕರ ಬರೆದು ೩–೪ ವರ್ಷಗಳಾದರೂ ಬಂದೇ ಇಲ್ಲ, ಸೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋದರೆ ಅಲ್ಲೇ ನಿಂತುಕೊಳ್ಳುತ್ತದೆಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಪ್ಪ.–ಸ್ಯಾನಿಟೋರಿಯಂಗೂ ಕೂಡ ೫೦೦ ಎ.ಎಂ.ಸಿ ಒಂದು ಎಕ್ಸ್‌ರೇ ಪ್ಲಾಂಟ್ ಮಂಜೂರಾಗಿದೆ, ಇನ್‌ಸ್ಟಾಲ್ ಆಗಬೇಕು ಅಷ್ಟೇ, ಇರತಕ್ಕ ಎಕ್ಸ್‌ರೇ ಕೆಲಸ ಮಾಡುತ್ತಿದೆ.

Difficult Financial Position of T.D.Bs.

420 SRI S.M.SHEERNALY CHANDRASEKHAR (Hosanagar) - Will the Minister for Rural Development and Panchayat Raj be pleased to state.-

(a) whether it has come to the notice of Government that many TDBs in the State cannot manage their affairs as they have no adequate sources of income or revenue;

(b) if so the remedies the Government have thought of, to overcome this difficulty?

SRI K.PRABHAKAR (Minister for Rural Development and Panchayat Raj) :

(a) Yes.

(b) Government is considering measurers to overcome the financial difficulties of TDBs.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.–ಹಾಲಿ ತಾಲ್ಲೂಕು ಬೋರ್ಡ್‌ಗಳನ್ನು ರಚನೆ ಮಾಡಿದ್ದೀರಲ್ಲ ಆ ತಾಲ್ಲೂಕು ಬೋರ್ಡ್‌ಗಳಿಗೆ ಒರತಕ್ಕ ಉತ್ಪನ್ನ ಏನು ದಾಖಲೆ ಆಧಾರದ ಮೇಲೆ ಸಿದ್ಧಾಂತಿ ಪಗಡದವರ ಸಂಬಳ–ಸಾರಿಗೆ, ಟಿ. ಎ. ಡಿ.ಎ.ಗೆ ಎಲ್ಲಿ ಏಷ್ಟು ವಿಚಾರಗಳಾಗುತ್ತವೆ ಮತ್ತು ಏಷ್ಟು ಉಳಿತಾಯವಾಗುತ್ತದೆ?

† ಶ್ರೀ ಕೆ. ಪ್ರಭಾಕರ್.– ಅದೆಲ್ಲ ಮೈನರ್ ಡೀಟೈಲ್ಸ್ ಆಯಿತು. ಈಗ ಇರುವ ಪರಮಾನ ಲ್ಯಾಂಡ್ ರೆವಿನ್ಯೂ, ಅದನ್ನು ೬೦:೪೦ ಪ್ರಮಾಣದಲ್ಲಿ ಹಂಚಿಕೊಡುತ್ತೇವೆ. ಕೆಲವು ತಾಲ್ಲೂಕು ಬೋರ್ಡ್‌ಗಳು ಸಂಬಳ ಕೊಡುವುದು ಕಷ್ಟವಾಗಿದೆ ಎಂದು ಸರ್ಕಾರಕ್ಕೆ ಬರೆಯುತ್ತಾರೆ. ಆಗಾಗ್ಗೆ ಅವುಗಳಿಗೆ ದುಡ್ಡು ತೊಂದರೆ ಇದೆ ಎಂಬುದನ್ನು ನೋಡಿ ನಿರ್ವಾಹಮಾಡುತ್ತೇವೆ. ಅವುಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಅವುಗಳ ಸ್ಥಿತಿ ಉತ್ತಮ ಪಡಬೇಕು, ಆದ್ದರಿಂದ ಆ ಬಗ್ಗೆ ಏನು ಕಾರ್ಯಕ್ರಮ ರೂಪಿಸಿಕೊಳ್ಳಬೇಕೆನ್ನುವುದನ್ನು ಈಗ ತೀವ್ರವಾಗಿ ಯೋಚಿಸುತ್ತಿದ್ದೇವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್. –ಈಗ ಹಾಲಿ ಏನಾಗಿದೆ ಎಂದರೆ, ೫ ಎಕರೆಗೆ ಒಳಪಟ್ಟು ಇರತಕ್ಕ ಜಮೀನಿಗೆ ಕಂದಾಯ ಇಲ್ಲವೆಂದು ಮಾಡಿದ್ದೀರಿ. ಜೊತೆಗೆ ಹೊಸನಗರ ತಾಲ್ಲೂಕಿನಲ್ಲಿ

ಶರಾವತಿ, ವರಾಹಿ ಮುಂತಾದವುಗಳ ಕೆಳಗೆ ಅಗ್ರಿಕಲ್ಚರ್ ಲ್ಯಾಂಡ್ ಇಲ್ಲವಾಗಿದೆ. ಆ ದ್ದರಿಂದ ಇಂಥ ಸಂದರ್ಭದಲ್ಲಿ ತ್ವರಿತವಾಗಿ ಕಾರ್ಯಕ್ರಮ ತೆಗೆದುಕೊಂಡು ರೆವಿನ್ಯೂ ಉತ್ಪನ್ನ ಬರುವಂತೆ ಮಾಡಿಕೊಡುತ್ತೀರಾ? ಫಾರೆಸ್ಟ್ ಇನ್‌ಕಂ ಬಗ್ಗೆ ಇದುವರೆಗೆ ಯಾವ ಆಜ್ಞೆಯೂ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—ಮಾಡಿಕೊಡುತ್ತೇವೆ.

SRI G. B. SHANKAR RAO.—The other day, the Hon'ble Minister for Finance while replying to the debate on the Supplementary Estimates has made a statement that in a couple of weeks he is making some ad-hoc grants to all the T.D.Bs in the State. I would like to know whether the Hon'ble Minister for Finance had any consultation with the Hon'ble Minister for Rural Development & Panchayat Raj with regard to the financial difficulties that the Taluka Boards are facing in the State. If they give ad-hoc grant, I would like to know whether it will be continued year by year? Are you thinking of making some permanent arrangement to solve their problems by amending the Taluka Board Act so that they could augment their resources?

ಶ್ರೀ ಕೆ. ಪ್ರಭಾಕರ್.—ಉತ್ತರದಲ್ಲಿ ಅಡಕವಾಗಿದೆ. 'Government is considering measures' ಎಂದು ಏನಿದೆ ಅದರಲ್ಲಿ ಈ ಎಲ್ಲ ದೃಷ್ಟಿಯನ್ನು ನಾವು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಒಂದು ವೇಳೆ ಅವುಗಳನ್ನು ಮಾಡುವುದು ತಡವಾಗಿ ಅಡ್‌ಹಾಕ್ ಗ್ರಾಂಟನ್ನು ಕೊಟ್ಟು ಅವರ ತೊಂದರೆಗಳನ್ನು ನಿವಾರಣೆ ಮಾಡಬೇಕೆಂಬ ದೃಷ್ಟಿಯಿಂದ ಅಪರು ಹೇಳಿದ್ದಾರೆಂದು ನಾನು ಅರ್ಥಮಾಡಿಕೊಳ್ಳುತ್ತೇನೆ. ಮೆಷರ್ಸ್ ಎನ್ನುವುದರಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ್, ಕೇಂದ್ರ ಸರ್ಕಾರದ ಪಾಲಿಸಿ, ಸಮ್ಮಿಲ್ಲರುವ ಅನುಕೂಲಗಳು, ಕಂದಾಯ ಮನ್ನಾ ಆಗಿರುವುದು ಇವೆಲ್ಲ ಸೇರಿವೆ. ಇದರ ಮೇಲೆ ಅವುಗಳಿಗೆ ಸಹಾಯ ಮಾಡುವುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಅದನ್ನು ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಸಚಿವರು ಉತ್ತರಿಸುತ್ತಾ, ತಾಲ್ಲೂಕು ಬೋರ್ಡುಗಳಿಗೆ ಶೇಕಡ ೬೦ರಷ್ಟು ವಂತಿಗೆಯನ್ನು ಕೊಡುತ್ತೇವೆಂದು ಹೇಳಿದರು. ಹಾಗಾದರೆ ಅದನ್ನು ಯಾವ ಸಾಲಿನಿಂದ ಕೊಡುತ್ತೀರಿ?

ಶ್ರೀ ಕೆ. ಪ್ರಭಾಕರ್.—ಎಲ್.ಆರ್. ಅಸೈನ್‌ಮೆಂಟ್‌ನಿಂದ ೫೦ ಪರ್ಸೆಂಟ್ ಮತ್ತು ಗ್ರಾಂಟ್ಸ್ ೧೦ ಪರ್ಸೆಂಟ್ ಒಟ್ಟು ೬೦ ಪರ್ಸೆಂಟ್ ಕೊಡುತ್ತೇವೆ.

ಶ್ರೀ ಷೇರ್ ಖಾನ್.— ಸ್ವಾಮಿ ರೆವಿನ್ಯೂ ಇನ್‌ಕಂನಿಂದ ೬೦ ಪರ್ಸೆಂಟ್ ಇದಕ್ಕೆ ವಂತಿಗೆಯನ್ನು ಕೊಡುತ್ತೇವೆ ಎಂದು ಹೇಳಿದಿರಿ. ಈ ತಾಲ್ಲೂಕ್ ಬೋರ್ಡ್‌ಗೆ ಈ ಒಂದು ಇನ್‌ಕಂನಿಂದಲೇ ವಂತಿಗೆಯನ್ನು ಕೊಡುವುದಾದರೆ ಅದಕ್ಕೆ ಸಾಕಾಗುವುದಿಲ್ಲ. ಆದುದರಿಂದ ಇನ್ನು ಇತರೇ ಇಲಾಖೆಗಳು ಏನು ಇವೆ ಅಂದರೆ ಮೈನಿಂಗ್ ಮತ್ತು ಎಕ್ಸೈಜ್‌ನಿಂದ ಏನು ಇನ್‌ಕಂ ಬರುತ್ತದೆ ಅದರಲ್ಲಿ ಸ್ವಲ್ಪ ಭಾಗವನ್ನಾದರೂ ಕೂಡ ಇದಕ್ಕೆ ಕೊಡುವುದಕ್ಕೆ ವಿಚಾರ ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ಪ್ರತಿ ಇಲಾಖೆಯಿಂದಲೂ ಬರತಕ್ಕಂಥಾ ವಂತಿಗೆಯನ್ನು ಇದಕೆ ಹಂಚುವುದಕ್ಕೆ ಬರುವುದಿಲ್ಲ. ಕೆಲವರು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಸ್ವಲ್ಪ ಕೊಡಿ ಎಂದು ಕೇಳಿದ್ದಾರೆ, ಇನ್ನು ಕೆಲವರು ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ಸ್ವಲ್ಪ ಕೊಡಿ ಎಂದು ಇಂಡಿಕೇಟೀವ್ ಆಗಿ ಎಂದು ಕೇಳಿದ್ದಾರೆ. ಅದನ್ನೆಲ್ಲಾ ಯೋಚನೆ ಮಾಡಿಯೇ ನಾವು ಫೈನಲ್ ಆಗಿ ಇಷ್ಟು ಕೊಡಬೇಕು ಅಂತ ಮಾಡಿರುವುದು ಅಂದರೆ ಗೌರ್ನಮೆಂಟ್ ಈಸ್ ಕನ್ಸಿಡರಿಂಗ್ ಮೆಷರ್ಸ್ ಅಂತ ಹೇಳಿರುವುದು.

ಶ್ರೀ ಕೆ. ಪೆಟ್. ಪಸುಮೇಗೌಡ.—ಸ್ವಾಮಿ, ಈ ತಾಲ್ಲೂಕು ಬೋರ್ಡುಗಳಿಗೆ ಆಲ್ಲಿಗೇ ಸೇರಿದಂಥಾ ಕೆರೆಗಳ ರಿಪೇರಿ, ಸ್ಕೂಲ್ ಕಟ್ಟಡ ಮತ್ತು ಪಬ್ಲಿಕ್ ಹೆಲ್ತ್ ರಸ್ತೆಗಳ ರಿಪೇರಿ ಇವೆಲ್ಲಾ ಸೇರಿರುತ್ತೆ.

ಒಂದೊಂದು ತಾಲ್ಲೂಕಿಗೂ ಕೂಡ ಇವರ ಇಡೀ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿದೆ. ಆದರೆ ಅವರಿಗೆ ಬರತಕ್ಕಂಥಾ ಒಂದು ಉತ್ಪತ್ತಿಯಲ್ಲಿ ಈ ಎಲ್ಲಾ ಕೆಲಸಗಳನ್ನೂ ಕೂಡ ಮಾಡಾಯಿಸುವುದಕ್ಕೆ ಬರುವುದಿಲ್ಲ. ಕೆಲವು ತಾಲ್ಲೂಕ್ ಬೋರ್ಡ್‌ಗಳ ಬಗ್ಗೆ ಹೇಳುವುದಾದರೆ ಕೆಲವು ಸಂದರ್ಭದಲ್ಲಿ ಆ ತಾಲ್ಲೂಕ್ ಬೋರ್ಡಿನ ಉತ್ಪತ್ತಿ ಅವರ ಒಂದು ಎಸ್ಟಾಬ್ಲಿಷ್‌ಮೆಂಟ್‌ಗೇನೇ ಸಾಕಾಗುವುದಿಲ್ಲ. ಆದುದರಿಂದ ನಾವು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ತಾಲ್ಲೂಕ್ ಬೋರ್ಡ್‌ಗಳಿಗೆ ಈ ಎಲ್ಲಾ ಮೆಂಟೇನ್ಸ್‌ಗಳಿಗೂ ಎಷ್ಟು ಹಣ ಬೇಕು ಮತ್ತು ಅವರ ಒಂದು ಜವಾಬ್ದಾರಿ ಏನು ಏನ್ನುವುದನ್ನು ಕೂಲಂಕಷವಾಗಿ ತಿಳಿದುಕೊಂಡು, ಸರ್ಕಾರ ಇದರ ಬಗ್ಗೆ ಅಲೋಚನೆ ಮಾಡಿ ಬೇಕಾದಂಥಾ ಗ್ರಾಂಟನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ?

ಶ್ರೀ ಕೆ. ಪ್ರಭಾಕರ್.—ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಎಂ. ವೀರನಾಳಿ ಚಂದ್ರಶೇಖರಯ್ಯ.—ಸ್ವಾಮಿ, ಈ ಪ್ರಶ್ನೆಯ (ಅ) ನೆ ಉತ್ತರದಾಗಿ ತಾಲ್ಲೂಕು ಆಫೀಸುಗಳ ಆರ್ಥಿಕ ತೊಂದರೆಗಳನ್ನು ನಿವಾರಣೆಮಾಡುವಕ್ಕೆ ಸಂಬಂಧಿಸಿದ ಕ್ರಮಗಳು ಸರ್ಕಾರದಪರ ಪರಿಶೀಲನೆಯಲ್ಲಿವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ತಮಗೆ ಒಂದು ಮೆಮೋರ್ಯಾಂಡಂ ಕೂಡ ಕೊಟ್ಟು ೮ ತಿಂಗಳಾಗಿದೆ. ನನ್ನ ತಾಲ್ಲೂಕ್ ಬೋರ್ಡ್ ಬಗ್ಗೆ ಹೇಳುವುದಾದರೆ ಇನ್ನು ಎಷ್ಟು ದಿವಸಗಳ ಕಾಲ ನಾವು ಹೀಗೆ ಕೇಳಿಕೊಂಡು ಕೂತಿರಬೇಕಾಗುತ್ತದೆ ಹೇಳಿ? ಇನ್ನು ಎಷ್ಟು ದಿವಸದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ. ಈವತ್ತಿನ ದಿವಸ ಈ ತಾಲ್ಲೂಕ್ ಬೋರ್ಡ್ ನನ್ನ ಆರ್ಥಿಕ ತೊಂದರೆಗಳಿಂದ ಮುಚ್ಚಬೇಕಾಗುತ್ತದೆ ಇಲ್ಲವೇ ಅದಕ್ಕೆ ಆರ್ಥಿಕ ನೆರವನ್ನು ಕೊಟ್ಟು ಮುಂದುವರೆಸಬೇಕಾಗುತ್ತದೆ, ಈ ಬಗ್ಗೆ ಏನು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ್.—ಅದರ ಬಗ್ಗೆ ಅಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ನಿಮ್ಮ ತಾಲ್ಲೂಕ್ ಬೋರ್ಡ್‌ನ ಪ್ರಶ್ನೆಯನ್ನು ವಿಚಿತವಾಗಿ ಕೇಳಿರುವುದರಿಂದ ಅದರ ಯೋಗಕ್ಷೇಮವನ್ನು ನಾನು ಕೇಳಿಕೊಂಡು ಅದರ ಬಗ್ಗೆ ವಿಚಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ ೧೮ ತಡೆಹಿಡಿಯಲಾಗಿದೆ. ಪ್ರಶ್ನೋತ್ತರ ವೇಳೆ ಮುಗಿಯಿತು.

SRI G. B. SHANKAR RAO.—Sir, I would like to say something about the question hour. As we all know the questions are the property of the entire House. So, whenever Members desire to put Supplementary questions which are said to be of general nature, the Member should allowed to put such questions to elicit information from the Ministers. Therefore, I impress upon the Hon'ble Speaker to permit the Members to put questions which are of general nature. To-day the Hon'ble Speaker should have allowed some more time for questions because we have been agitating all these years to get more resources for T.D.B.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದು ಹೊಗಿರುವುದರಿಂದ ಬೇರೆ ಪ್ರಶ್ನೆಯನ್ನು ತಗೆದುಕೊಂಡಿದ್ದೇನೆ. ತಮಗೂ ಕೂಡ ಈ ಬಗ್ಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಶ್ರೀಮಾನ್ ವೀರನಾಳಿ ಚಂದ್ರಶೇಖರಪ್ಪನವರು ಈ ಬಗ್ಗೆ ೭-೮ ಉಪಪ್ರಶ್ನೆಗಳನ್ನು ಕೇಳಿದ್ದಾರೆ ಜೊತೆಗೆ ಬೇರೆ ಬೇರೆ ಸದಸ್ಯರೂ ಕೂಡ ಕೇಳಿದ್ದಾರೆ. ನಿಮಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಟ್ಟು ಹಾಗೆ ಬೇರೆ ಸದಸ್ಯರಿಗೂ ಕೂಡ ಕೇಳುವುದಕ್ಕೆ ಅವಕಾಶ ಕೊಡಬೇಡವೇ?

SRI G. B. SHANKAR RAO.—Mr. Speaker, Sir, with all due respect to the Chair I only submit that sufficient opportunity should be given to all the Members to put supplementary questions. That is my submission.

ಅಧ್ಯಕ್ಷರು.—ಅದು ನಿಮ್ಮ ಅಭಿಪ್ರಾಯ ಇರಬಹುದು. ತಮಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟ ಹಾಗೆ ಬೇರೆ ಸದಸ್ಯರಿಗೂ ಕೂಡ ಅವಕಾಶ ಕೊಡಬೇಡವೇ? ಮತ್ತು ಶ್ರೀಮಾನ್ ಶೀರನಾಳಿ ಚಂದ್ರಶೇಖರ್‌ರವರು ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. ತಮಗೆ ಈ ಬಗ್ಗೆ ಇನ್ನೂ ಹೆಚ್ಚು ವಿವರಗಳು ಬೇಕಾದರೆ ಅರ್ಧಗಂಟೆ ಚರ್ಚೆಗೆ ಅವಕಾಶ ಬೇಕು ಎಂದು ಕೇಳಬಹುದು. I have permitted not less than half a dozen members to put supplementaries. ಶ್ರೀಮಾನ್ ಎ. ಹೆಚ್. ಪಸುವೆ ಗೌಡರಿಗೆ, ಶ್ರೀಮಾನ್ ಷೇರ್‌ಖಾನ್‌ರವರಿಗೆ ಇನ್ನೂ ಇತರರಿಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ನಿಮಗೆ ಅವಕಾಶವಿದ್ದ ಹಾಗೆ ಅವರಿಗೂ ಸಹ ಅವಕಾಶ ಕೊಡಬೇಕೇ ಬೇಡವೇ?

ಶ್ರೀ ಜಿ. ಬಿ. ರಂಕರರಾವ್.—ತಮಗೆ ಅಗೌರವ ತೋರಿಸಬೇಕು ಅಂತ ಏನೂ ಇಲ್ಲ. ಈ ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಕೂಡ ತನಗೆ ಪ್ರತಿಪಾದಿಸುವ ಹಕ್ಕು ಇದೆ. ಆ ಪ್ರಶ್ನೆಯನ್ನು ಮೊಟಕು ಮಾಡಬೇಕು ಅಂತ ನನ್ನ ಪ್ರಶ್ನೆ ಅಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು

Question for Answer on the Day (but not taken up)
Bus Depot for Sindhanoor

41 SRI R. NARAYANAPPA (Sindhanoor)—Will the Minister for Transport and Tourism be pleased to state :—

(*a*) when the Sindhanoor bus depot would be started;

(*b*) the reasons for delay in starting the said depot;

(*c*) the reasons for not solving the problem relating to the site for Sindhanoor bus depot from a long time;

(*d*) whether the Government intends to take up immediate steps to solve the said problem?

SRI R. GUNDU RAO.—Minister for Transport and Tourism

(*a*) The question of starting a bus depot at Sindhanoor will be considered by the K.S.R.T.C. after receipt of sanction to the nationalisation scheme for Raichur Division including Koppal and Kustagi.

(*b*) *Vide* reply to clause (a) above.

(*c*) The K.S.R.T.C. had acquired the concerned site for bus depot at Sindhanoor. But half of the land acquired for the purpose has been struck down by the High Court in a writ petition filed in this behalf. Hence, the K.S.R.T.C. is initiating ways and means to acquire fresh land for the purpose.

(*d*) Yes.